ಯಾವುದೇ ಸಂಬಂಧವಿಲ್ಲದಂತೆ ಅವರ ಮಧ್ಯೆ ಕಾರ್ತೀಕದ ಜಲಪಾತದಂತೆ ನಗು, ಮಾತು ಧುಮುಕುತ್ತಿವೆ. ಈ ಹಿಂದೆ ಇದಕ್ಕೂ ಹೆಚ್ಚಾಗಿ ನಾನೂ ಚೈತನ್ಯ ಮಳೆಗಾಲದ ಜಲಪಾತದಂತೆ ಧುಮ್ಮಿಕ್ಕುತ್ತಿದ್ದೆವು.

ಏನೆಲ್ಲಾ ಹರಟುತ್ತಿದ್ದೆವು. ಒಂದು ದಿನ ಹಬ್ಬಕ್ಕೆ ಊರಿಗೆ ಹೊರಟಾಗ ಚೈತನ್ಯ ತನ್ನ ಬಾಲ್ಯ, ಯೌವನದ ವಿಶೇಷ ಸಂಗತಿಗಳನ್ನು ಹಂಚಿಕೊಂಡಿದ್ದ. ಅವು ಇತ್ತೀಚೆಗೆ ಮತ್ತೆ ಮತ್ತೆ ಮರುಕಳಿಸುತ್ತಿರುತ್ತವೆ.

"ಪ್ರತಿ ಯುಗಾದಿಗೂ ನಮ್ಮೂರಲ್ಲಿ ಗೂಳಿ ಪಂದ್ಯ ನಡೆಯುತ್ತದೆ. ರೊಚ್ಚಿಗೆದ್ದು ನುಗ್ಗುವ ಗೂಳಿಗಳನ್ನು ಅಡ್ಡಗಟ್ಟಿ ನಿಲ್ಲಿಸಬಲ್ಲ ಶೌರ್ಯವಂತನು ನಮ್ಮೂರಲ್ಲಿ ನಾನೊಬ್ಬನೆ" ಎಂದ ಚೈತನ್ಯ.

"ಗೂಳಿನಾ... ಹೆದರಿಕೆಯಾಗಲ್ಲವೆ" ಕೇಳಿದೆ.

"ಹೆದರಿಕೆ? ನನಗೆ... ನನ್ನನ್ನು ನೋಡಿದರೆ ಅವಕ್ಕೇ ಭಯ."

"ಹೋ.. ಸಲ್ಮಾನ್ ಖಾನ್ ಶಾರುಖ್ ಖಾನ್‌ರ ನಂತರ ನೀನೇ ವೀರಾಧಿವೀರ" ಎಂದು ಬರುವ ನಗೆಯನ್ನು ಅದುಮಿಕೊಂಡು "ಅಂತಹ ಹಳ್ಳಿಯಿಂದ ಬಂದಿರುವೆಯಲ್ಲಾ... ಇಷ್ಟು ಸೊಫೆಸ್ಟಿಕೇಟೆಡ್ ಆದದ್ದಾದರೂ ಹೇಗೆ" ಕೇಳಿದೆ.

"ಇಂಟರ್ ಮೀಡಿಯಟ್‌ವರೆಗೂ ನಮ್ಮ ಊರಲ್ಲಿ ಓದಿದೆ. ನಮ್ಮ ತಾಯಿಗೆ ನನ್ನನ್ನು ಆ ಊರಿನಲ್ಲಿರುವ ಸರಕಾರಿ ಕಾಲೇಜಿಗೆ ಕಳುಹಿಸುವುದು ಇಷ್ಟವಿರಲಿಲ್ಲ. ಬೆಂಗಳೂರಿನ ಸರರ್ಕಾರಿ ಕಾಲೇಜಿಗೆ ಜಾಯಿನ್ ಮಾಡಿದರು. ಆ ಕಾಲೇಜು, ಈಗ ಈ ನಗರ, ಈ ಉದ್ಯೋಗ ಇವೆಲ್ಲವೂ ತುಂಬಾನೇ ಕಲಿಸಿವೆ" ಎಂದು ನಕ್ಕ.

"ಈಗ ಆ ಗೂಳಿಗಳೊಂದಿಗೆ ಹೊಡೆದಾಡಲು ಹೋಗುವೆಯಾ".

"ಇಲ್ಲಿ ಗೂಳಿಗಳೆಲ್ಲಿವೆ. ಹಳ್ಳಿಯಲ್ಲಿ ಪಂದ್ಯಗಳು ಈಗಲೂ ನಡೆಯುತ್ತವೆ. ಆದರೆ, ಆ ಪಂದ್ಯಗಳಿಗೆ ಹೋಗುವುದಿಲ್ಲ".

"ಯಾಕೆ?"

ಸ್ವಲ್ಪ ಹೊತ್ತು ಮೌನವಾಗಿದ್ದು "ಆ ಊರಿಂದ, ಆ ಜನರಿಂದ, ಆ ಆಟಗಳಿಂದ ತುಂಬಾ ದೂರ ಬಂದಿದ್ದೇನೆ. ಈಗ ಹಿಂದಕ್ಕೆ ತಿರುಗಿ ನೋಡಿದರೆ ಆ ಗೂಳಿಗಳೊಂದಿಗಿನ ಹೊಡೆದಾಟ ತುಂಬಾ ಅಮಾನವೀಯ, ಅನಾಗರಿಕವೆನಿಸುತ್ತೆ. ನಿಜಕ್ಕೆ ಅಂಥವುಗಳ ಅಗತ್ಯವಾದರೂ ಏನಿದೆ ಹೇಳು" ಎಂದ.

"ಧೈರ್ಯ ಸಾಲದೆ?" ಕೆಣಕಿದೆ.

"ನೀನೊಳ್ಳೆ ಮಾರಾಯ್ತಿ... ಈಗಲೂ ಕಣಕ್ಕಿಳಿದರೆ ಒಂದೇನೂ ನಾಲ್ಕೈದು ಗೂಳಿಗಳನ್ನು ತಡೆದು ನಿಲ್ಲಿಸಬಲ್ಲೆ. ನಿಜಕ್ಕೆ ಗೂಳಿ ನನ್ನನ್ನು ನೋಡಿದರೆ ಅಬ್ಬರಿಸುವುದಕ್ಕೂ ಹಿಂದೇಟು ಹಾಕುತ್ತದೆ. ಈ ಕೈಗಳಲ್ಲಿಯ ಕಸುವು ಏನೆಂಬುದು ನೀನು ಊಹಿಸಲಾರೆ". ಸ್ವಲ್ಪ ಗರ್ವದಿಂದ ಕೂಡಿದ ಆ ಧ್ವನಿಯು ಮುದ್ದೆನಿಸಿ ಅವನ ಕೈಗಳಿಗೆ ಮುತ್ತಿಟ್ಟೆ.



